

ನಾನು ಗೌರವದಿಂದ ನಿರ್ವಹಿಸಿದ್ದೇನೆ. ನನ್ನ ಕೈಗಳಿಗೆ ನೆತ್ತರು ಮೆತ್ತಿಕೊಳ್ಳುವುದನ್ನು ಬಯಸುವುದಿಲ್ಲ. ನೀವು ಗಲ್ಲಿಗೇರಿಸುವವರು ಹಾಗೂ ನಾನೊಬ್ಬ ಕ್ಷೌರಿಕ. ಪ್ರತಿಯೊಬ್ಬನಿಗೂ ಅವನದೇ ಆದ ಕಾರ್ಯ ಇರುತ್ತದೆ. ಅಷ್ಟೇ! ಹೌದು ಅವನದೇ ವೃತ್ತಿ.

ಇಷ್ಟೊತ್ತಿಗಾಗಲೇ ಆತನ ಗಡ್ಡ ಹೋಗಿ, ಮುಖ ಸ್ವಚ್ಛವಾಗಿ ಹೊಳೆಯುತ್ತಿತ್ತು. ಕುರ್ಚಿಯಲ್ಲಿ ನೇರವಾಗಿ ಕೂತು ತನ್ನ ಮುಖವನ್ನು ನೋಡಿಕೊಂಡ; ಆಮೇಲೆ ತನ್ನೆರಡೂ ಅಂಗೈಗಳನ್ನು ಉಜ್ಜಿಕೊಂಡು ಕೆನ್ನೆಯ ಮೇಲೆ ನೇವರಿಸಿಕೊಂಡು ಪ್ರಫುಲ್ಲತೆ ಅನುಭವಿಸಿದ.

'ಥ್ಯಾಂಕ್ಸ್' ಎಂದು ಆತ ಕೃತಜ್ಞತೆ ಸಲ್ಲಿಸಿದ. ಗೋಡೆಯತ್ತ ನಡೆದು, ತನ್ನ ಟೋಪಿ, ಪಿಸ್ತೂಲು ಹಾಗೂ ಗುಂಡುಗಳ ಬೆಲ್ಟ್ ತೆಗೆದುಕೊಂಡ. ಈತನಕ ನನ್ನಲ್ಲಿ ಉಂಟಾಗಿದ್ದ ಉದ್ವೇಗ, ಆತಂಕದಿಂದ ತೀರಾ ನಿಸ್ತೇಜನಾಗಿರುವೆ ಅನಿಸಿತು. ಯೋಚನೆಗಳ ಸಂಘರ್ಷದಿಂದ ಬೆವರಿ ಬೆವರಿ, ಅಂಗಿಯಂತೂ ತೋಯ್ದು ಹೋಗಿದೆ ಎಂದು ಭಾಸವಾಗುತ್ತಿತ್ತು. ಉಡುಪುಗಳ ಮೇಲೆ ಬೆಲ್ಟ್ ಧರಿಸಿದ ಟಾರೆಸ್, ಪಿಸ್ತೂಲನ್ನು ಬೆಲ್ಟಿಗೆ ಸರಿಯಾಗಿ ಜೋಡಿಸಿಕೊಂಡ. ಕನ್ನಡಿಯಲ್ಲೊಮ್ಮೆ ಮುಖ ನೋಡಿಕೊಂಡು ತಲೆಗೂದಲು ಸರಿಪಡಿಸಿಕೊಂಡು ಟೊಪ್ಪಿ ಧರಿಸಿದ. ತನ್ನ ಪ್ಯಾಂಟಿನ ಜೇಬಿನಿಂದ ಒಂದಷ್ಟು ನಾಣ್ಯಗಳನ್ನು ಹೊರತೆಗೆದು ನನಗೆ ಕೊಟ್ಟ. ಬಳಿಕ, ಹೊರಹೋಗಲು ಹೆಜ್ಜೆ ಹಾಕಿದ. ಹಾಗೆ ಹೊರಟವನು ಬಾಗಿಲ ಬಳಿ ಒಂದು ಕ್ಷಣ ನಿಂತು, ನನ್ನ ಕಡೆ ಹೊರಳಿ ಹೇಳಿದ:

'ನೀನು ನನ್ನನ್ನು ಕೊಲ್ಲಬಹುದು ಎಂದು ಅವರು ಮೊದಲೇ ನನಗೆ ಹೇಳಿದ್ದರು. ಅದು ನಿಜವೇ ಅಂತ ತಿಳಿಯಲು ನಾನಿಲ್ಲಿಗೆ ಬಂದೆ. ಆದರೆ, ಒಬ್ಬನನ್ನು ಕೊಲ್ಲುವುದೆಂದರೆ ಅಷ್ಟು ಸುಲಭವಲ್ಲ. ಬೇಕಿದ್ದರೆ ಈ ಮಾತನ್ನು ನೀನು ಬರೆದಿಟ್ಟುಕೊಳ್ಳಬಹುದು' ಎಂದು ನುಡಿದು ದಾಪುಗಾಲಿಡುತ್ತ ಹೊರಟು ಹೋದ.

●